ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ(ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

ಕವಿಪ್ರನಿನಿ/ಎಸ್‌ಎ3/90327/2018-19

ದಿನಾಂಕ: 12 JUN 2018

## ಸುತ್ತೋಲೆ

ವಿಷಯ: ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ರಲ್ಲಿ ದಿನಾಂಕ: 09.02.2017 ರಂದು ನೀಡಿದ ತೀರ್ಪಿನ ಅನ್ವಯ ಮುಂಬಡ್ತಿ ಹಾಗೂ ಹಿಂಬಡ್ತಿ ನೀಡಿರುವುದರ ಬಗ್ಗೆ.

---

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ರಲ್ಲಿ ದಿನಾಂಕ: 09.02.2017 ರಂದು ನೀಡಿದ ತೀರ್ಪಿನ ಅನ್ವಯ ರಾಜ್ಯ ಪದವಾರು ವೃಂದಗಳಿಗೆ ಮುಂಬಡ್ತಿ ಹಾಗೂ ಹಿಂಬಡ್ತಿಗಳನ್ನು ಮತ್ತು ಸಹಾಯಕ ಇಂಜಿನಿಯರ್ ರವರುಗಳನ್ನು ಕಿರಿಯ ಇಂಜಿನಿಯರ್‌ಗಳನ್ನಾಗಿ ಹಿಂಬಡ್ತಿಗಳನ್ನು ನಿಗಮದ ದಿನಾಂಕ: 16.04.2018 ಹಾಗೂ 05.05.2018 ಅಧಿಸೂಚನೆಗಳಲ್ಲಿ ತೈನಾತಿಸಲಾಗಿರುತ್ತದೆ. ಈ ಆದೇಶಗಳಲ್ಲಿನ ಕೆಲವು ಅಧಿಕಾರಿಗಳು ಈ ದಿನದವರೆವಿಗೂ ಕಾರ್ಯವಿಮುಕ್ತಿಗೊಂಡಿಲ್ಲದಿರುವುದು ಹಾಗೂ ವರದಿಮಾಡಿ ಕೊಳ್ಳದಿರುವುದು ನಿಗಮದ ಗಮನಕ್ಕೆ ಬಂದಿದೆ. ನಿಗಮ ಆದೇಶವನ್ನು ಪಾಲಿಸದಿರುವುದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ.

ಸರ್ಕಾರಕ್ಕೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿರುವ ಬಗ್ಗೆ ಮಾಹಿತಿ ಸಲ್ಲಿಸಬೇಕಾಗಿರುತ್ತದೆ.

ನಿಗಮದ ದಿನಾಂಕ: 16.04.2018 ಹಾಗೂ 05.05.2018 ಅಧಿಸೂಚನೆಗಳಲ್ಲಿ ತೈನಾತಿಸಲಾದ ಅಧಿಕಾರಿಗಳು ಯಾವುದೇ ಕಾರಣ ನೀಡದೆ ತಕ್ಷಣವೇ ಕಾರ್ಯ ವಿಮುಕ್ತಿಗೊಳ್ಳಲು ಸೂಚಿಸಿದೆ. ದಿನಾಂಕ: 20.06.2018 ರೊಳಗೆ ಕಾರ್ಯವಿಮುಕ್ತಿಗೊಳ್ಳದ ಅಧಿಕಾರಿಗಳು ಪದೋನ್ನತಿಯ ಆಸಕ್ತಿ ಇಲ್ಲದಿರುವಿದೆಂದು ಭಾವಿಸಿ ಹಾಗೂ ಇವರುಗಳ ಈ ನಡುವಳಿಕೆಯಿಂದ ನಿಗಮ ಕೆಲಸ ಕಾರ್ಯಗಳಿಗೆ ದಕ್ಕೆಯುಂಟಾಗಿರುವುದರಿಂದ ಇವರ ಪದೋನ್ನತಿಯನ್ನು ರದ್ದುಗೊಳಿಸ -ಲಾಗುವುದು.

...2

ಹಿಂಬಡ್ತಿ ನೀಡಿರುವ, ಕಾರ್ಯವಿಮುಕ್ತಿಗೊಳ್ಳದ ಅಧಿಕಾರಿಗಳ ವಿರುದ್ಧ ಸಂಬಂಧಿಸಿದ ಮೇಲಾಧಿಕಾರಿಗಳು ಈ ಸುತ್ತೋಲೆಯನ್ನು ಉಲ್ಲೇಖಿಸಿ, ಸದರಿ ಅಧಿಕಾರಿಗಳ ವಿರುದ್ಧ ಕವಿಮಂ ನೌಕರರ(ವ.ಶಿ.ನಿ. ಮತ್ತು ಮೇ.) ನಿಬಂಧನೆಗಳು 1987ರ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುವ ಪ್ರತ್ಯೇಕ ಸೂಚನಾ ಪತ್ರಗಳನ್ನು ಕೂಡಲೇ ಹೊರಡಿಸಲು ಸೂಚಿಸಿದೆ.

ಅಧಿಕಾರಿಗಳು ಕಾರ್ಯಾಭಾರವಹಿಸಿಕೊಂಡ ಸಿ.ಟಿ.ಸಿ ಪ್ರತಿಗಳನ್ನು email ಮೂಲಕ manager.ar.kptcl@gmail.com ಗೆ ಕಳುಹಿಸುವುದು.

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)
ಕ.ವಿ.ಪ್ರ.ನಿ.ನಿ

<u>ಪ್ರತಿಗಳನ್ನು ಮಾಹಿತಿಗಾಗಿ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ,ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು

<u>ಪ್ರತಿಗಳನ್ನು ಮಾಹಿತಿಗಾಗಿ ಹಾಗೂ ಸದರಿ ಅಧಿಕಾರಿಗಳಿಗೆ ಕೂಡಲೇ ಪ್ರತ್ಯೇಕ ಸೂಚನಾ ಪತ್ರಗಳನ್ನು ಹೊರಡಿಸಲು ಸೂಚಿಸಿದೆ.</u>

1. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
   ಬೆ.ವಿ.ಸ.ಕಂ, ಬೆಂಗಳೂರು / ಚಾ.ವಿ.ಸ.ನಿ.ನಿ, ಮೈಸೂರು/
   ಮ.ವಿ.ಸ.ಕಂ, ಮಂಗಳೂರು / ಹು.ವಿ.ಸ.ಕಂ, ಹುಬ್ಬಳ್ಳಿ / ಗು.ವಿ.ಸ.ಕಂ, ಕಲಬುರಗಿ
2. ವ್ಯವಸ್ಥಾಪಕ ನಿರ್ದೇಶಕರು, ಪಿಸಿಕೆಎಲ್, ಬೆಂಗಳೂರು
3. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ಆರ್ಥಿಕ ಸಲಹೆಗಾರರು

<u>ಪ್ರತಿಗಳು</u>

1. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು